

'ಐಪಿಎಲ್'ನಿಂದ ಕ್ರಿಕೆಟ್ ವಿಶ್ವದ ಗಮನಸೆಳೆದಿರುವ ದೇವದತ್ತ ಪಡಿಕ್ಕಲ್

ದೇಶದ ಕ್ರಿಕೆಟ್ ಅರ್ಥ ವ್ಯವಸ್ಥೆಯಿಂದ ಬೇಸತ್ತ ವಿಂಡೀಸ್ ಆಟಗಾರರಿಗೆ ಇದು ಓಯಸಿಸ್. ಆಸ್ಟ್ರೇಲಿಯಾದ ಸ್ಲೆಡ್ಜಿಂಗ್ ಪ್ರತಿಭೆಗಳಿಗೆ ನೀತಿಪಾಠ. ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ಸ್ಪರ್ಧೆಯ ತುರುಸಿಗಾಗಿ ಎದುರು ನೋಡುವ ದೇಸಿ ಪ್ರತಿಭೆಗಳಿಗೆ ಅವಕಾಶದ ಆಕಾಶ. ದೇವದತ್ತ ಪಡಿಕ್ಕಲ್, ಇಶಾನ್ ಕಿಶನ್, ಸೂರ್ಯಕುಮಾರ್ ಯಾದವ್, ರಾಹುಲ್ ತೇವಾಟಿಯಾ, ಶುಭಮನ್ ಗಿಲ್, ರಯಾನ್ ಪರಾಗ್, ಸಂಜು ಸ್ಯಾಮ್ಸನ್ ಇವರೆಲ್ಲ ಈಗ 'ಬಿಗ್ ಹಿಟರ್'ಗಳು. ಕೆ.ಎಲ್. ರಾಹುಲ್, ಶಿಖರ್ ಧವನ್, ಮಯಂಕ್ ಅಗರ್‌ವಾಲ್, ರೋಹಿತ್ ಶರ್ಮ, ಕೈರನ್ ಪೊಲಾರ್ಡ್, ಹಾರ್ದಿಕ್ ಪಾಂಡ್ಯ ಇವರಿಗೆ ಕಲಿಕೆಯ ಲೀಡರ್‌ಗಳು.

ಐಪಿಎಲ್ ಶುರುವಾಗಿ ಹಲವು ವರ್ಷಗಳು ಉರುಳಿದ ಮೇಲೆ ಅದರ ಕೌಶಲ ಕಾಣ್ಕೆ ಕಾಣಿಸತೊಡಗಿತು. 2007ರಲ್ಲಿ ಟ್ವೆಂಟಿ20 ವಿಶ್ವಕಪ್‌ನಲ್ಲಿ ಹಾಗೂ 2011ರಲ್ಲಿ ಏಕದಿನ ವಿಶ್ವಕಪ್‌ನಲ್ಲಿ ಭಾರತ ಚಾಂಪಿಯನ್ ಆಗಲು ಅದು ಇಂಧನವಾಗಿದ್ದು ಸುಳ್ಳಲ್ಲ. ಮಹೇಂದ್ರ ಸಿಂಗ್ ಧೋನಿ ನಾಯಕತ್ವದ ಶಿಲ್ಪವನ್ನು ಗಟ್ಟಿಯಾಗಿಸಿದ್ದರಲ್ಲೂ ಅದರ ಕಾಣ್ಕೆ ಇದೆ. ಈಗ ರೋಹಿತ್ ಶರ್ಮ ಭಾರತದ ನಾಯಕನಾಗಲಿ ಎಂಬ ಸೊಲ್ಲು ಹುಟ್ಟಲು ಕೂಡ ಅದೇ ಕಾರಣ. ಬಿಸಿಸಿಐನ ಬಿಸಿ ಕುರ್ಚಿಯ ಮೇಲೆ ಕುಳಿತಿರುವ ಸೌರವ್ ಗಂಗೂಲಿ ಐಪಿಎಲ್ ಕ್ರಿಕೆಟ್ಟನ್ನು ಕಣ್ತುಂಬಿಕೊಳ್ಳುತ್ತಾ, 'ಸೂರ್ಯಕುಮಾರ್‌ಗೂ ಒಂದೇ ಬರತಾವ ಕಾಲ' ಎಂದು ಹೇಳುತ್ತಿರುವುದನ್ನೂ ಗಮನಿಸಬೇಕಿದೆ. ಧೋನಿ ಇನ್ನು ಭಾರತದ ಪರವಾಗಿ ಆಡುವುದಿಲ್ಲ. ರಾಹುಲ್, ಸಂಜು ಸ್ಯಾಮ್ಸನ್, ರಿಷಭ್ ಪಂತ್ ಮೂವರೂ ಸರತಿಯಲ್ಲಿದ್ದಾರೆ. ಅವರ ಹಿಂದಕ್ಕೆ ಹೋಗಿ ನಿಲ್ಲಬಲ್ಲ ಲಕ್ಷಣವನ್ನು ಇಶಾನ್ ತೋರಿದ್ದಾರೆ. ಕ್ರಿಕೆಟ್ ಹೀಗೆಲ್ಲ ಬೆಳೆಯುವುದನ್ನು ಕೂಡ ಕಾಪಿಬುಕ್ ಶೈಲಿ ಪ್ರೇಮಿಗಳು ಜೀರ್ಣಿಸಿಕೊಳ್ಳದೇ ವಿಧಿಯಿಲ್ಲ. ಕೋವಿಡ್ ಕಾಲದಲ್ಲಿ ಗುಂಪು ಆಟ ಅಸಾಧ್ಯ ಎನ್ನುವಂತಿದ್ದಾಗ ದೊಡ್ಡದೊಂದು ಟೂರ್ನಿ ನಡೆಸಿ, ಅರ್ಥವಿಜ್ಞಾನವನ್ನೂ ಆಟವಿಜ್ಞಾನವನ್ನೂ ಇನ್ನಷ್ಟು ಪ್ರಯೋಗಮುಖಿಯಾಗಿಸಿದ್ದಕ್ಕೆ ಶಹಬ್ಬಾಸ್ ಹೇಳಲೇಬೇಕು.

ಕಪಿಲ್ ದೇವ್ 2004ರಲ್ಲಿ ಕವರ್ಸ್ ತಲೆ ಮೇಲೆ ಹೊಡೆಯುವ ಬಗ್ಗೆ ಹೇಳಿದ್ದರಲ್ಲ, ಆ ವರ್ಷ ಶಿಖರ್ ಧವನ್ ದೇಸಿ ಕ್ರಿಕೆಟ್‌ನಲ್ಲಿ ಅತಿ ಹೆಚ್ಚು ರನ್‌ಗಳನ್ನು ಕಲೆಹಾಕಿದ್ದರು. ಆಗ ಅವರದ್ದೇ ದೆಹಲಿಯ ಸೆಹ್ವಾಗ್, ಗೌತಮ್ ಗಂಭೀರ್ ತಂಡದಲ್ಲಿ ಇದ್ದಿದ್ದರಿಂದ ಅವಕಾಶದ ಹಿಂದಿನ ಸಾಲಿನ ಹುಡುಗನಾಗಿ ನಿಂತಿದ್ದರು. ಈಗ ಅವರೇನಾಗಿದ್ದಾರೆ ಎನ್ನುವುದಕ್ಕೂ ಚುಟುಕು ಕ್ರಿಕೆಟ್ ಕನ್ನಡಿ ಹಿಡಿಯುತ್ತಿದೆ. ಹೊಡಿ–ಬಡಿ ಆಟದ ಜತೆಗೆ 'ಇನ್ನಷ್ಟು ಕಲಿಯೋಣ ನಡಿ' ಎನ್ನುವ ಪ್ರಜ್ಞೆಯನ್ನೂ ಐಪಿಎಲ್ ರೂಢಿಸುತ್ತಿರುವುದನ್ನು ವಿಶೇಷವಾಗಿ ಗಮನಿಸಬೇಕಿದೆ; ಟೆಸ್ಟ್ ಕ್ರಿಕೆಟ್‌ನ ಶೈಲಿ ಇದರಿಂದ ಎಷ್ಟರಮಟ್ಟಿಗೆ ಮುಕ್ಕಾಗಲಿದೆ ಎನ್ನುವ ಪ್ರಶ್ನೆಯ ಸಹಿತ.

ಪ್ರತಿಕ್ರಿಯಿಸಿ: feedback@sudha.co.in

# ಆರೋಗ್ಯ ಸಾಹಿತ್ಯದ ವಿಶಾಲ ಜಗತ್ತು

'ಕನ್ನಡ ಜಗತ್ತು ಮತ್ತು ವಿಜ್ಞಾನ ಜಗತ್ತು' ಸಮೀಕ್ಷಾ ಲೇಖನವನ್ನು 'ಸುಧಾ' (ನ. 12, ಲೇ: ಟಿ.ಆರ್. ಅನಂತರಾಮು) ಪ್ರಕಟಿಸಿದ್ದು ಶ್ಲಾಘನೀಯ. ಈ ವಿಜ್ಞಾನ ಸಾಹಿತ್ಯದ ಅವಲೋಕನದಲ್ಲಿ, ಪರಿಗಣಿಸದೇ ಇರುವ ಆರೋಗ್ಯ ಸಾಹಿತ್ಯದ ವೈಶಾಲ್ಯವನ್ನು ಸಂಕ್ಷಿಪ್ತವಾಗಿ ತಮ್ಮ ಮುಂದಿಡಬಯಸುತ್ತೇನೆ.

ಕನ್ನಡದಲ್ಲಿ ಲಭ್ಯವಿರುವ ಅತ್ಯಂತ ಪ್ರಾಚೀನ ಆರೋಗ್ಯ ಕೃತಿ, ಕ್ರಿ.ಶ. 1049ರಲ್ಲಿ ಚಂದ್ರರಾಜನು ಬರೆದ 'ಮದನತಿಲಕ'.

1840ರಲ್ಲಿ ಆಧುನಿಕ ವೈದ್ಯಕೀಯಕ್ಕೆ ಸಂಬಂಧಿಸಿದ ಭಾಗವತಂ ಕೃಷ್ಣಸ್ವಾಮಿಯವರ 'ಶಿಶುವೈದ್ಯಕೀಯ ಸಂಜೀವಿನಿ' ಪ್ರಕಟವಾಯಿತು. ಇದಾದ ನಂತರ 1960ರವರೆಗೆ ಸುಮಾರು 60 ವೈದ್ಯಕೀಯ ಕೃತಿಗಳು (ಮೂಲ ಮತ್ತು ಅನುವಾದಿತ ಕೃತಿಗಳು) ಕನ್ನಡದಲ್ಲಿ ಪ್ರಕಟವಾಗಿವೆ. ತ್ರಿವೇಣಿಯವರು (1928–1963) ಕನ್ನಡದಲ್ಲಿ ಮನೋವೈದ್ಯಕೀಯ ಹಿನ್ನೆಲೆಯಲ್ಲಿ ಕಥೆಗಳನ್ನು ಹಾಗೂ ಕಾದಂಬರಿಗಳನ್ನು ಬರೆದರು. ಆಧುನಿಕ ವೈದ್ಯಕೀಯಕ್ಕೆ ಸಂಬಂಧಪಟ್ಟ ಹಾಗೆ ಡಾ. ಅನುಪಮಾ ನಿರಂಜನ 'ಪ್ರಜಾವಾಣಿ'ಯಲ್ಲಿ ಓದುಗರ ಪ್ರಶ್ನೆಗಳಿಗೆ ಉತ್ತರ ಬರೆದರು. 12 ಆರೋಗ್ಯ ಪುಸ್ತಕಗಳನ್ನು ಬರೆದ ಅವರ 'ತಾಯಿಮಗು' 50ಕ್ಕೂ ಹೆಚ್ಚು ಮುದ್ರಣಗಳನ್ನು ಕಂಡಿದೆ.ಡಾ. ಶಿವರಾಮ್ 1974ರಲ್ಲಿ ಪ್ರಕಟಿಸಿದ 'ಮನಮಂಥನ' ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ (1974) ಹಾಗೂ ಕೇಂದ್ರಸಾಹಿತ್ಯ ಅಕಾಡೆಮಿ (1976) ಪ್ರಶಸ್ತಿ ಲಭಿಸಿತು. ಕೇಂದ್ರ ಸಾಹಿತ್ಯ ಅಕಾಡೆಮಿ ಇದುವರೆಗೂ ನೀಡಿರುವ ಎಲ್ಲ ಭಾಷೆಯ ಪ್ರಶಸ್ತಿಗಳನ್ನು ಕೇವಲ ಸಾಹಿತ್ಯ ಕೃತಿಗಳಿಗೆ ಮಾತ್ರ ನೀಡಿದೆ. ಈ 'ಸರ್ವನಿಯಮಕ್ಕೆ' ವಿನಾಯತಿ 'ಮನಮಂಥನ'. ಇದೊಂದು ಆರೋಗ್ಯ ಕೃತಿ. (ಬಿಜಿಎಲ್ ಸ್ವಾಮಿಯವರ 'ಹಸುರು ಹೊನ್ನು' ಪ್ರವಾಸ ಸಾಹಿತ್ಯದ ಶೀರ್ಷಿಕೆಯಲ್ಲಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ಪಡೆದಿದೆ. ವಿಜ್ಞಾನ ಕೃತಿಯಾಗಿ ಅಲ್ಲ). ಡಾ. ಶಿವಪ್ಪ ಕನ್ನಡ ವೈದ್ಯಕೀಯ ಪದಕೋಶವನ್ನು 1973ರಲ್ಲಿ ಪ್ರಕಟಿಸಿದರು. ಅವರು ಬರೆದ 'ವೈದ್ಯಕ ಪದಗಳ ಹುಟ್ಟು, ರಚನೆ' ಎನ್ನುವ ಪುಸ್ತಕ ಅಸಾಧಾರಣವಾದದ್ದು.

ಈಗ ಮೈಸೂರಿನ ತಜ್ಞವೈದ್ಯರಾದ ಡಾ. ಎಸ್.ಪಿ. ಯೋಗಣ್ಣ ಹಾಗೂ ಬೆಂಗಳೂರಿನ ಮಕ್ಕಳ ಶಸ್ತ್ರವೈದ್ಯರಾದ ಡಾ. ಸೋಮಶೇಖರ್ ಬರೆದ ಕನ್ನಡ ವೈದ್ಯಕೀಯ ಹೊಸ ನಿಘಂಟುಗಳು ಪ್ರಕಟಣೆಗೆ ಸಿದ್ಧವಾಗುತ್ತಿವೆ. ಹಿಂದಿ ಮತ್ತು ತೆಲುಗು ಭಾಷೆಗಳನ್ನು ಬಿಟ್ಟರೆ, ಕನ್ನಡದಲ್ಲಿ ಮಾತ್ರ ವೈದ್ಯಕೀಯ ಪದಕೋಶವು ಪ್ರಕಟವಾಗಿದೆ. ಡಾ. ಸಿ.ಆರ್. ಚಂದ್ರಶೇಖರ್ ಅವರು ಕನ್ನಡದಲ್ಲಿ 150ಕ್ಕೂ ಹೆಚ್ಚು ಆರೋಗ್ಯ ಪುಸ್ತಕಗಳನ್ನು ಪ್ರಕಟಿಸಿರುವರು. ಇವರು ಬರೆದ 'ಮನೋವಿಸ್ಮಯ', 2000 ಪುಟಗಳ ಬೃಹತ್ ಗ್ರಂಥ. ಡಾ. ಪಿ.ಎಸ್. ಶಂಕರ್ ಕನ್ನಡಲ್ಲಿ 100ಕ್ಕೂ ಹೆಚ್ಚು ಆರೋಗ್ಯ ಕೃತಿಗಳನ್ನು ಬರೆದಿದ್ದಾರೆ. ಇವರ ಪ್ರಧಾನ ಸಂಪಾದಕತ್ವದಲ್ಲಿ ಹಂಪಿಯ ಕನ್ನಡ ವಿಶ್ವವಿದ್ಯಾಲಯವು ವೈದ್ಯಕೀಯ ವಿಶ್ವಕೋಶದ ಎರಡು ಆವೃತ್ತಿಗಳನ್ನು ಹೊರತಂದಿದೆ. ಮೈಸೂರು ವಿಶ್ವವಿದ್ಯಾಲಯವು ವಿಷಯ ವಿಶ್ವಕೋಶದ ಮಾಲಿಕೆಯಲ್ಲಿ 'ವೈದ್ಯಕೀಯ ವಿಶ್ವಕೋಶ'ವನ್ನು ಡಾ. ಎಸ್.ಪಿ. ಯೋಗಣ್ಣನವರ ಪ್ರಧಾನ ಸಂಪಾದಕತ್ವದಲ್ಲಿ ಹೊರತರುತ್ತಿದೆ.

ಡಾ. ಸ.ಜಾ.ನಾಗಲೋಟಿಮಠ, ಡಾ. ಅನ್ನಪೂರ್ಣಮ್ಮ, ಡಾ. ಎಚ್. ಡಿ. ಚಂದ್ರಪ್ಪಗೌಡ, ಡಾ. ಲೀಲಾವತಿ ದೇವದಾಸ್, ಡಾ. ಮಹಾಬಲರಾಜು, ಡಾ. ಕರವೀರಪ್ರಭು ಕ್ಯಾಲಕೊಂಡ, ಡಾ. ಎಚ್.ಎಸ್. ಮೋಹನ್, ಡಾ. ಬಿ.ಜಿ. ಚಂದ್ರಶೇಖರ್, ಡಾ. ವಸುಂಧರಾ ಭೂಪತಿ, ಡಾ. ಕೆ.ಎಸ್. ಚೈತ್ರಾ ಹಾಗೂ ಡಾ. ನಾ. ಸೋಮೇಶ್ವರ ಇವರೆಲ್ಲ ಕನ್ನಡದಲ್ಲಿ ಸಾಕಷ್ಟು ಆರೋಗ್ಯ ಕೃತಿ ರಚಿಸಿದ್ದಾರೆ.

ನವಕರ್ನಾಟಕ ಸಂಸ್ಥೆಯು ಮಾರಾಟ ಮಾಡುವ ಒಟ್ಟು ಪುಸ್ತಕಗಳಲ್ಲಿ ಆರೋಗ್ಯ ಪುಸ್ತಕಗಳ ಪಾಲು ಶೇ. 20ರಷ್ಟು. ಈ ಮಟ್ಟಿಗೆ ವಿಜ್ಞಾನ ಪುಸ್ತಕಗಳು ಮಾರಾಟವಾಗುತ್ತಿಲ್ಲ. ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಭಾರತೀಯ ಭಾಷೆಗಳಲ್ಲಿ ಜನಪ್ರಿಯಗೊಳಿಸುತ್ತಿರುವವರನ್ನು ಗುರುತಿಸಿ, ಕೇಂದ್ರಸರ್ಕಾರವು ಪ್ರಶಸ್ತಿಗಳನ್ನು ನೀಡಿ ಗೌರವಿಸುತ್ತಿದೆ. ಕನ್ನಡದಲ್ಲಿ ಆರೋಗ್ಯ ವಿಜ್ಞಾನವನ್ನು ಜನಪ್ರಿಯಗೊಳಿಸಿದುದಕ್ಕಾಗಿ ಡಾ. ಸಿ.ಆರ್. ಚಂದ್ರಶೇಖರ್ ಹಾಗೂ ಡಾ. ಪಿ.ಎಸ್. ಶಂಕರ್ ಅವರಿಗೆ ಈ ಪ್ರಶಸ್ತಿಗಳು ಸಂದಿವೆ.

■ ಡಾ. ನಾ. ಸೋಮೇಶ್ವರ